## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

### ಎಸ್. ಸಿ. 386/2022

| | | |
|---|---|---|
| ಸಾಕ್ಷಿದಾರರ ಹೆಸರು | ವಾಸೀಂ ಅಹಮದ್ | ಪ್ರಮಾಣ ವಚನ ಮಾಡಿದ ದಿನಾಂಕ: 12.01.2026 |
| ತಂದೆಯ/ಗಂಡನ ಹೆಸರು | ಜಿಕ್ರಿಯಾ ಪಾಶಾ | |
| ವಯಸ್ಸು | 36 ವರ್ಷ | |
| ವೃತ್ತಿ | ಡ್ರೈವರ್ | ಪ್ರಾ.ಸಾಃ 11 |
| ವಾಸ ಸ್ಥಳ | ಕೇರಳಾ | ಚಾ.ಸಾಃ 5 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.11 (ಸಿ) ಎಂದು ಗುರುತಿಸಲಾಯಿತು.

ದಿನಾಂಕ 11.04.2019 ರಂದು ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್‌ಲ್ ನಿಪಿ–11 ಕ್ಕೆ ಸಹಿ ಮಾಡಿದ್ದೆ. ನಾನು ಸಹಿ ಮಾಡಿದಾಗ ಒಂದು ಕಾರು ಪೊಲೀಸ್ ಠಾಣೆಯ ಆವರಣದಲ್ಲಿ ಇತ್ತು. ಪೊಲೀಸರು ಸಹಿ ಮಾಡಬೇಕು ಬನ್ನಿ ಎಂದು ಹೇಳಿ ಕರೆದುಕೊಂಡು ಹೋಗಿ ಸಹಿ ಮಾಡಿದ್ದರು. ನನ್ನ ಹುಡುಗ ಸಂತು ಎಂಬುವನು

ನನ್ನನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಿದ್ದ ನನಗೆ ಏನು ಗೊತ್ತಿರಲಿಲ್ಲ. ಪೊಲೀಸರು ನನ್ನ ಸಹಿಯನ್ನು ಏಕೆ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿರಲಿಲ್ಲ. ನನಗೆ ಕಾರಿನ ಫೋಟೋವನ್ನು ತೋರಿಸಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಫೋಟೋ ನೋಡಿ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 04.11.2019 ರಂದು ನಾನು ನಿಪಿ-11 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ. ನಾನು ಪೊಲೀಸ್ ಠಾಣೆ ಯ ಆವಾರಣದಲ್ಲಿ ಇದ್ದಂತಹ ಕಾರ್ ನ ನಂಬರ್ ಕೆಎ-41-ಎಂಸಿ-4591 ಇತ್ತು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಕಾರ್ ಆರೋಪಿತನಿಗೆ ಸೇರಿದ್ದು ಅದನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ-11 ಅನ್ನು ಬೆಳಗ್ಗೆ 8.00 ಗಂಟೆಯಿಂದ 8.45 ರವರೆಗೆ ಅಮಾನತ್ತು ಪಂಚನಾಮೆ ಬರೆದು ನನ್ನ ಸಮಕ್ಷಮವೇ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ರಿಂದ 4 ರ ಫೋಟೋಗಳಲ್ಲಿ ಇರುವ ಕಾರನ್ನೇ ಆ ದಿನ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಈ ಎಲ್ಲಾ

ವಿಚಾರಗಳು ಗೊತ್ತಿದ್ದರೂ ಮತ್ತು ಮಹಜರ್ ನ ಬಗ್ಗೆ ಕೇಳಿ ತಿಳಿದುಕೊಂಡು ಸಹಿ ಮಾಡಿದ್ದರುಾ ಸಹ ನನಗೆ ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ** :

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**